**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-337/2023 **PW**-1

**ದಿಃ 18.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಪಿ ಪಿ ವಕೀಲರಿಂದಃ**

ವಾದಿ ನಂಃ1 ನಿಮ್ಮ ಅತ್ತೆಯವರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 2 ನೇ ವಾದಿ ನನ್ನ ಹೆಂಡತಿ. ನನ್ನ ಅತ್ತೆಯವರಿಗೆ ಹೊಲಗಳಿವೆ ಎಂದರೆ ಸರಿ. ಸದರಿಯವರು ಹೊಲಕ್ಕೆ ಹೋಗುವದು ಹಾಗೂ ಕೆಲಸ ಮಾಡುವದು ಮಾಡುತ್ತಾರೆಂದರೆ ಸಾಕ್ಷಿ ಹೋಗಂಗಿಲ್ಲ ಎನ್ನುತ್ತಾರೆ. ನಿಮ್ಮ ಮನೆಯವರು ಎಂದರೆ ಸಾಕ್ಷಿ ನನ್ನ ಮಗಳಿಗೆ ಎರಡೂ ಕಾಲು ಅಂಗವಿಕಲತೆ ಇದ್ದು ಆ ಕಾರಣಕ್ಕೆ ಅವರು ಹೋಗುವದಿಲ್ಲ ಎನ್ನುತ್ತಾರೆ. ನನ್ನ ಅತ್ತೆಯವರಿಗೆ ನಡೆಯಲು ಆಗುವದಿಲ್ಲ ಎಂದರೆ ನಾನು ಯಾವದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಕೊಟ್ಟಿಲ್ಲ ಎನ್ನುತ್ತಾರೆ. ನನ್ನ ಮನೆಯವರು ಸಾಕ್ಷಿ ಹೇಳಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಬರುತ್ತಾರೆ ಎನ್ನುತ್ತಾರೆ. ಅವರು ನ್ಯಾಯಾಲಯಕ್ಕೆ ಬಂದರೆ ಸತ್ಯ ಸಂಗತಿ ಹೊರಗೆ ಬರುತ್ತದೆಂಬ ಕಾರಣಕ್ಕೇ ನಾನು ಜಿಪಿಎ ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸಾಕ್ಷಿ ನನ್ನ ಮಗಳಿಗೆ ನಡೆಯಲು ಬರುವದಿಲ್ಲ ಆ ಕಾರಣ ಅವರು ನ್ಯಾಯಾಲಯಕ್ಕೆ ಬಂದಿಲ್ಲ ಎನ್ನುತ್ತಾರೆ. ಕೆಂಚಪ್ಪ ಎಂನಬುವವರು ನನ್ನ ಹೆಂಡತಿ ಮನೆತನದ ಮೂಲ ಪುರುಷ ಎಂದರ ಸರಿ. ಅವರಿಗೆ ಇಬ್ಬರು ಗಂಡು ಮಕ್ಕಳು ಎಂದರೆ ಸರಿ ಅವರು ಮರಣ ಹೊಂದಿರುತ್ತಾರೆಂದರೆ ಸರಿ. ಅವರ ಒಬ್ಬಳೇ ಮಗಳಾದ ರತ್ನವ್ವ ಇವಳು ಮದುವೆಯಾಗದೇ ಮರಣ ಹೊಂದಿರುತ್ತಾಳೆ. ವಿರುಪಾಕ್ಷಪ್ಪ ಮತ್ತು ರವೀಂದರವರಿಗೆ ಎಲ್ಲಾ ಆಸ್ತಿಗಳಲ್ಲಿ ಸಮಪಾಲು ಇದೆ ಎಂದರೆ ಸರಿ. ಸರ್ವೆ ನಂಃ358/2 ಈ ಆಸ್ತಿ ವಿರುಪಾಕ್ಷಪ್ಪ ಹಾಗೂ ರವೀಂದ್ರ ಇವರ ಜಂಟಿ ಹೆಸರಿನಲ್ಲಿದೆ ಎಂದರೆ ಸರಿ. ಸರ್ವ ನಂಃ150 ಕ್ಷೇತ್ರ 4 ಎಕರೆ 3 ಗುಂಟೆ ಜಮೀನು ಕೂಡಾ ವಿರುಕಿಪಾಕ್ಷಪ್ಪ ಹಾಗೂ ರವೀಂದ್ರ ರವರ ಜಂಟಿ ಹೆಸರಿನಲ್ಲಿದೆ ಆದರೆ ಉಳುಮೆಯನ್ನು ನಾವು ಮಾಡುತ್ತಿದ್ದೇವೆಂದು ಸಾಕ್ಷಿ ನುಡಿಯುತ್ತಾರೆ. ಸರ್ವೆ ನಂಃ151 ಕ್ಷೇತ್ರ 3 ಎಕರೇ 3 ಗುಂಟೆ ಜಮೀನು ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಪ್ರತಿವಾದಿ 1 ರಿಂದ 4 ರವರ ಹೆಸರಿನಲ್ಲಿದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಜಮೀನನ್ನು ಪಿತ್ರಾರ್ಜಿತ ಆಸ್ತಿ ಮಾರಿ ಕೊಂಡುಕೊಂಡಿರುತ್ತಾರೆಂದು ನುಡಿಯುತ್ತಾರೆ. ಯಾವ ಸರ್ವೆ ನಂಬರ ಜಮೀನನ್ನು ಮಾರಾಟ ಮಾಡಿದ್ದಾರೆಂದರೆ ಸಾಕ್ಷಿ ಸರ್ವೆ ನಂ.592 ರಲ್ಲಿ 8 ಎಕರೆ

ಜಮೀನು , ಮತ್ತೊಂದು 8 ಎಕರೆ ಜಮೀನು ಈ ಎರಡೂ ಜಮೀನುಗಳನ್ನು ಮಾರಾಟ ಮಾಡಿ ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ಎರಡೂ ಜಮೀನುಗಳನ್ನು ಮಾರಾಟ ಮಾಡಿ ಸರ್ವೆ ನಂಃ151 ರ ಜಮೀನನ್ನು ಪ್ರತಿವಾದಿಯರು ಖರೀದಿ ಹಿಡಿದಿರುತ್ತಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಸರ್ವೆ ನಂಃ151 ಜಮೀನನ್ನು ಪ್ರತಿವಾದಿಯರು ಸರ್ವೆ ನಂಃ358/2 ರ ಆಸ್ತಿಯಲ್ಲಿ ಬಂದ ಹಣದಿಂದ ಮತ್ತು ಬೇರೆ ಆಸ್ತಿಗಳನ್ನು ಒತ್ತೆ ಇಟ್ಟುಕೊಂಡು ಹಾಗೂ ಲಾವಣಿ ಮಾಡಿ ದುಡಿದು ತೆಗೆದುಕೊಂಡಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಃ592, 5 ಎಕರೆ 38 ಗುಂಟೆ ಜಮೀನು ಇದ್ದು ಅದರಲ್ಲಿ 5 ಎಕರೆಯನ್ನು ಸರಕಾರ ಸ್ವಾದೀನಪಡಿಸಿಕೊಂಡಿದ್ದು, ಉಳಿದ 38 ಗುಂಟೆ ಆಸ್ತಿ ನಾಲ್ಕು ಮಂದಿಗೆ ಪಾಲು ಇರುತ್ತದೆ. ನಾಲ್ಕು ಮಂದಿಯಲ್ಲಿ ವಿರುಪಾಕ್ಷಪ್ಪ ಹಾಗೂ ರವೀಂದ್ರ ಇವರು ಕೂಡಾ ಬರುತ್ತಾರೆಂದರೆ ಸರಿ. ಸದರಿ 5 ಎಕರೆ 38 ಗುಂಟೆ ಜಮೀನು ಶಿವಗಂಗಾ, ಅಶೋಕ ಹಾಗೂ ರವೀಂದ್ರ ಇವರಿಗೆ ಮಂಜೂರಾಗಿರುತ್ತದೆ. ವಿರುಪಾಕ್ಷಪ್ಪ ಇವರಿಗೆ ಮಂಜೂರಾಗಿತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ವಿರುಪಾಕ್ಷಪ್ಪ ಇವರಿಗೆ ಮಂಜೂರಾಗಿದ್ದು ಅದನ್ನು ನಾವು ಮಾರಿಕೊಂಡಿರುತ್ತೇವೆಂದರೆ ಸಾಕ್ಷಿ ಕೊಟ್ಟಿಲ್ಲ ಎನ್ನುತ್ತಾರೆ. 5 ಎಕರೆ 38 ಗುಂಟೆಯಲ್ಲಿ 38 ಗುಂಟೆ ಉಳಿದ ಆಸ್ತಿಯನ್ನು ಈ ದಾವಾದಲ್ಲಿ ನಾನು ಆಸ್ತಿಯನ್ನಾಗಿ ಸೇರಿಸಿಲ್ಲ ಎಂದರೆ ಸರಿ.ಸರ್ವೆ ನಂಃ592 ವಿಪಿಸಿ ನಂಃ2 ಇದು ಹಳೇ ಮನೆ ಎಂದರೆ ಸಾಕ್ಷಿ ಇದು ಹಳೇ ಮನೆಯಲ್ಲ ವಿಪಿಸಿ ನಂಃ188/3 ಹಳೇ ಮನೆ ಎನ್ನುತ್ತಾರೆ. ಸದರಿ ವಿಪಿಸಿ ನಂಃ188/3 ಮಳೆಗೆ ಬಿದ್ದು ಆ ನಂತರ ಆ ಮನೆಯನ್ನು ರಿಪೇರಿ ಮಾಡಿ ಮತ್ತೆ ಕಟ್ಟಿಕೊಂಡಿರುತ್ತಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. 5 ಎಕರೆ 38 ಗುಂಟೆಯಲ್ಲಿ ಉಳಿದ 38 ಗುಂಟೆ ವಿಸ್ತೀರ್ಣದಲ್ಲಿ ನನ್ನ ಅತ್ತೆ ಮನೆಕಟ್ಟಿಕೊಂಡಿರುತ್ತಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಎರಡು ಕ್ರಯಪತ್ರಗಳನ್ನು ತೋರಿಸಿ ಆ ಮನೆ ಇದೇನಾ ನೋಡಿ ಎಂದರೆ ಸಾಕ್ಷಿ ಫೋಟೋಗಳನ್ನು ನೋಡಿ ಹೌದು ಇದೇ ಮನೆ ಎನ್ನುತ್ತಾರೆ. ಸದರಿ ಛಾಯಾಚಿತ್ರಗಳನ್ನು ನಿಡಿ 1 ಮತ್ತು 2 ಎಂದು ಗುರುತಿಸಲಾಯಿತು. ಸದರಿ 38 ಗುಂಟೆ ಜಾಗಾದಲ್ಲಿ ಯಾವದೇ ಪಾಲುವಿಭಾಗ ಆಗಿರುವದಿಲ್ಲ ಆದರೂ ನಾವು ಅಲ್ಲಿ ಮನೆಕಟ್ಟಿಕೊಂಡಿರುತ್ತೇವೆಂದರೆ ಸಾಕ್ಷಿ ಅವರು ಚೆನ್ನಾಗಿದ್ದಾಗ ಮಾತುಕತೆ ಮಾಡಿಕೊಂಡು ಅವರವರ ಲೆಕ್ಕಕ್ಕೆ ನಾಲ್ಕು ಮಂದಿ ಮನೆಕಟ್ಟಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ 38 ಗುಂಟೆ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ಹೇಳಿದ್ದು ಸದರಿ ಆಸ್ತಿಯ ಮೂಲ ಪುರುಷ ಕೆಂಚಪ್ಪ ಮತ್ತು ಅವರ ಅಣ್ಣತಮ್ಮಂದಿರ ನಡುವೆ ಕೂಡಾ ವಾಟ್ನೀಯಾಗಿಲ್ಲ ಎಂದರೆ ಸರಿ. ಅವರ ಅಣ್ಣ ತಮ್ಮಂದಿರನ್ನು ಇದರಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ನಾವು 38 ಗುಂಟೆ ಸಂಬಂದ ಯಾವದೇ ದಾವಾ ಹೂಡಿಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.